<u>ದಿಃ **01-04-2024** ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>

<u>ಮುಂದುವರೆದ ಮುಖ್ಯ ವಿಚಾರಣೆ ಅರ್ಜಿದಾರ ಪರ ಶ್ರೀ.ಬಿ ಸಿ ಕೆ ವಕೀಲರಿಂದ</u>

ನಾನು ಈ ಪ್ರಕರಣದಲ್ಲಿ **1** ನೇ ಅರ್ಜಿದಾರಳಿದ್ದು, ನನ್ನ ಮುಖ್ಯ ವಿಚಾರಣೆಯ ಸಾಕ್ಷಿಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ವಿಷಯಗಳು ನನಗೆ ತಿಳಿದಿವೆ ಮತ್ತು ಸತ್ಯವಾಗಿವೆ.

ದೂರಿನ ದೃಢೀಕೃತ ನಕಲನ್ನು ನಿ ಪಿ **1** ಎಂದು, ಪ್ರ.ವ.ವರದಿಯ ದೃಢೀಕೃತ ನಕಲನ್ನು ನಿ ಪಿ **2** ಎಂದು, ಸ್ಥಳ ಪಂಚನಾಮೆಯ ದೃಢೀಕೃತ ನಕಲನ್ನು ನಿ ಪಿ **3** ಎಂದು, ವಾಹನ ಪರಿಶೀಲನಾ ಪಂಚನಾಮೆಯ ದೃಢೀಕೃತ ನಕಲನ್ನು ನಿ ಪಿ **4** ಎಂದು, ಭಾವಚಿತ್ರದ ದೃಢೀಕೃತ ನಕಲನ್ನು ನಿ ಪಿ **5** ಎಂದು, ಐ ಎಮ್ ವಿ ವರದಿಯ ದೃಢೀಕೃತ ನಕಲನ್ನು ನಿ ಪಿ **6** ಎಂದು, ಶವ ಪಂಚನಾಮೆಯ ದೃಢೀಕೃತ ನಕಲನ್ನು ನಿ ಪಿ **7** ಎಂದು, ಪಿ ಎಮ್ ವರದಿಯ ದೃಢೀಕೃತ ನಕಲನ್ನು ನಿ ಪಿ **8** ಎಂದು, ದೋಷಾರೋಪಣ ಪತ್ರದ ದೃಢೀಕೃತ ನಕಲನ್ನು ನಿ ಪಿ **9** ಎಂದು ಗುರುತಿಸಲಾಯಿತು. ಮೃತ ನನ್ನ ಮಗನಾದ ಉಮೇಶ ಚಿಕ್ಕೇರಿಗೆ ಸಂಬಂಧಿಸಿದ ಆಧಾರ ಕಾರ್ಡಿನ ನೋಟರಿ ಪ್ರತಿಯನ್ನು, ನನ್ನ ಹಾಗೂ **2** ಮತ್ತು **4** ನೇ ಅರ್ಜಿದಾರರ ಆಧಾರ ಕಾರ್ಡಗಳ ನೋಟರಿ ಪ್ರತಿಯನ್ನು ಹಾಜರುಪಡಿಸಿದ್ದೇನೆ. (ಸಾಕ್ಷಿಯು ಈ ದಿನ ಮೂಲ ಆಧಾರ್ ಕಾರ್ಡಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನೋಟರಿ ಪ್ರತಿಗಳೊಂದಿಗೆ ತಾಳೆ ಮಾಡಿ ನೋಡಿ, ಸರಿ ಇದ್ದು ಮೂಲ ಆಧಾರ್ ಕಾರ್ಡಗಳನ್ನು ಸಾಕ್ಷಿಗೆ ಹಿಂತಿರುಗಿಸಲಾಗಿದೆ) ಆಧಾರ್ ಕಾರ್ಡಗಳ ನೋಟರಿ ಪ್ರತಿಗಳನ್ನು ನಿ ಪಿ **10** ರಿಂದ ನಿ ಪಿ **13** ಎಂದು ಗುರುತಿಸಲಾಯಿತು. ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣವನ್ನು ಹಾಜರುಪಡಿಸಿದ್ದು, ಅದನ್ನು ನಿ ಪಿ **14** ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಎದುರುದಾರ ಪರ ಶ್ರೀ.ಎಸ್ ಟಿ ಕೆ ವಕೀಲರಿಂದಃ</u>

ಅಪಘಾತ ನಡೆದಾಗ ನಾನು ಊರಿನಲ್ಲಿದ್ದೆ. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡದೇ ಇರುವ ಕಾರಣ ಯಾರ ತಪ್ಪಿನಿಂದ ಅಪಘಾತವಾಗಿದೆ ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ ಎಂದರೆ ಚಾಲಕನ ತಪ್ಪಿನಿಂದ ಅಪಘಾತವಾಗಿದೆ. ಅಪಘಾತದ ದಿನ ನನ್ನ ಮಗ ಶಿಗ್ಗಾಂವಿಗೆ ಹೋಗಿದ್ದ. ಅಪಘಾತ ರಾತ್ರಿ **7-30** ಗಂಟೆಗೆ ಆಗಿದೆ. ನನ್ನ ಮಗ ಪ್ರತಿ ದಿನ ಬೈಚವಳ್ಳಿಯಿಂದ ಶಿಗ್ಗಾಂವಿಗೆ ಓಡಾಡಿಕೊಂಡಿದ್ದ. ನನ್ನ ಮಗ

ಅವನಿಗೆ ಸೇರಿದ ಮೋಟರ್ ಸೈಕಲ್ಲಿನಲ್ಲಿ ಹೋಗುತ್ತಿದ್ದ. ಮೋಟರ್ ಸೈಕಲ್ ಮೃತ ನನ್ನ ಮಗನ ಹೆಸರಿನಲ್ಲಿಯೇ ಇತ್ತು. ಆ ದಿನ ನನ್ನ ಮಗ ಶಿಗ್ಗಾಂವಿನಿಂದ ಸಂಜೆ 5-30 ಗಂಟೆಗೆ ಬೈಚವಳ್ಳಿಗೆ ಹೊರಟಿದ್ದೇನೆ ಎಂದು ಕರೆ ಮಾಡಿದ್ದ. ಆನಂತರ ನನ್ನ ಮಗ ನನಗೆ ಕರೆ ಮಾಡಿಲ್ಲ. ನಾನು ಅಪಘಾತದ ಸ್ಥಳಕ್ಕೆ ಭೇಟಿ ಕೊಟ್ಟಿಲ್ಲ. ಅಪಘಾತದ ಸ್ಥಳದಲ್ಲಿ ರಸ್ತೆಯು ಎಸ್ ಆಕಾರದ ತಿರುವಿನಿಂದ ಕೂಡಿದೆ ಎಂದರೆ ನಾನು ನೋಡಿಲ್ಲ. ಸದರಿ ರಸ್ತೆ ಎಷ್ಟು ಅಗಲ ಇದೆ ಎಂದು ನನಗೆ ಗೊತ್ತಿಲ್ಲ. ಆ ರಸ್ತೆಯ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಮಗ ಶಿಗ್ಗಾಂವಿಯ ಒಂದು ಖಾಸಗಿ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ, ಯಾವ ಕಚೇರಿ ಎಂದು ಗೊತ್ತಿಲ್ಲ. ನನ್ನ ಮಗ ಒಂದು ಸಂಘದಲ್ಲಿ ಕೆಲಸ ಮಾಡುತ್ತಿದ್ದ. ಅವನ ಹುದ್ದೆ ಏನು ಎಂದು ಗೊತ್ತಿಲ್ಲ.

2. ಅಪಘಾತದ ಸಮಯದಲ್ಲಿ ನನ್ನ ಮಗನ ಬಳಿ ದ್ವಿಚಕ್ರ ವಾಹನ ಚಲಾಯಿಸಲು ಲೈಸೆನ್ಸ ಇತ್ತು. ಆ ದಿನ ನನ್ನ ಮಗ ಮನೆಗೆ ಊಟಕ್ಕೆ ಬರುತ್ತೇನೆ ಎಂದು ನನಗೆ ಕರೆ ಮಾಡಿ ಹೇಳಿದ್ದರಿಂದ ಮನೆಗೆ ಬರಲು ತಡವಾಗುತ್ತಿದೆ ಎಂಬ ಕಾರಣಕ್ಕಾಗಿ ಮೋಟರ್ ಸೈಕಲ್ಲನ್ನು ಅತೀ ವೇಗವಾಗಿ ಚಲಾಯಿಸಿಕೊಂಡು ಬರುತ್ತಿದ್ದ ಎಂದರೆ ಸರಿಯಲ್ಲ. ಅಪಘಾತದ ದಿನ ನನ್ನ ಮಗ ಬೈಕನ್ನು ವೇಗವಾಯಿ ಚಲಾಯಿಸಿಕೊಂಡು ಬಂದು ಎದುರಿನಿಂದ ಬರುತ್ತಿದ್ದ ಕೆಎ 21 ಎಫ್ 0246 ರ ಕೆ ಎಸ್ ಆರ್ ಟಿ ಸಿ ಬಸ್ಸಿಗೆ ಸ್ವತಃ ಡಿಕ್ಕಿಪಡಿಸಿದ್ದಾನೆ ಎಂದರೆ ಸರಿಯಲ್ಲ. ಅಪಘಾತಕ್ಕೆ ಸಂಬಂಧಿಸಿದಂತೆ ದೂರನ್ನು 2 ನೇ ಅರ್ಜಿದಾರರು ನೀಡಿದ್ದಾರೆ. ಪೊಲೀಸರು ನನ್ನ ಮಗನ ತಪ್ಪಿನಿಂದಲೂ ಅಪಘಾತವಾಗಿದೆ ಎಂದು ಆತನನ್ನು 1 ನೇ ಆರೋಪಿಯನ್ನಾಗಿ ಮಾಡಿ ಅಂತಿಮ ವರದಿ ಸಲ್ಲಿಸಿದ್ದಾನೆ ಎಂದರೆ ಸರಿಯಲ್ಲ. ಆ ದಿನ ನನ್ನ ಮಗ ಮಧ್ಯ ಸೇವನೆ ಮಾಡಿ ದ್ವಿಚಕ್ರ ವಾಹನ ಚಲಾಯಿಸುತ್ತಿದ್ದ ಎಂದು ಪೊಲೀಸರು ಅಂತಿಮ ವರದಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಆ ದಿನ ನನ್ನ ಮಗನ ಬಳಿ ದ್ವಿಚಕ್ರ ವಾಹನ ಚಲಾಯಿಸಲು ಡಿ ಎಲ್ ಇರಲಿಲ್ಲ ಎಂದು ಪೊಲೀಸರು ಅಂತಿಮ ವರದಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ಮಗನ ತಪ್ಪಿನಿಂದಲೂ ಅಪಘಾತವಾಗಿದೆ ಎಂದು ಪೊಲೀಸರು ಸಲ್ಲಿಸಿರುವ ಅಂತಿಮ ವರದಿಯನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನಾವು ಪ್ರಶ್ನಿಸಿಲ್ಲ. ಅಂತಿಮ ವರದಿಯನ್ನು ಪ್ರಶ್ನಿಸಲು ತೊಂದರೆ ಇತ್ತೆ ಎಂದರೆ ಇಲ್ಲ.

**3.** ಅಪಘಾತದ ಸಮಯದಲ್ಲಿ ನನ್ನ ಮಗನಿಗೆ **28** ವರ್ಷ ವಯಸ್ಸಾಗಿತ್ತು. ನನ್ನ ಮಗ ಪದವಿ ಓದಿದ್ದ. ನನ್ನ ಮಗನ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ ಶಾಲಾ ದಾಖಲೆಯನ್ನು ಹಾಜರುಪಡಿಸಿಲ್ಲ. ನನ್ನ ಮಗನಿಗೆ ಸಂಬಂಧಪಟ್ಟಂತೆ ಜನನ ಪ್ರಮಾಣ ಪತ್ರ ಹಾಜರುಪಡಿಸಿಲ್ಲ ಆದರೆ ನನ್ನ ಬಳಿ ಇದೆ. ಅಪಘಾತದ ಸಮಯದಲ್ಲಿ ನನ್ನ ಮಗನಿಗೆ ತಿಂಗಳಿಗೆ ರೂ. **35,000-00** ಸಂಬಳ ಇತ್ತು. ಅಷ್ಟು ಸಂಬಳ ಇತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ನನ್ನ ಮಗನ ಸಂಬಳದ ಬಗ್ಗೆ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇರಲಿಲ್ಲ.

**4.** ನನಗೆ ಒಟ್ಟು ಮೂರು ಜನ ಮಕ್ಕಳು. **3** ನೇ ಅರ್ಜಿದಾರರಿಗೆ ಮದುವೆಯಾಗಿದೆ. **4** ನೇ ಅರ್ಜಿದಾರರು ಗ್ರಾಮೀಣ ಕೂಟದಲ್ಲಿ ಕೆಲಸ ಮಾಡುತ್ತಿದ್ದರು, ಈಗ ಆರೋಗ್ಯ ಸರಿ ಇಲ್ಲದೇ ಇರುವ ಕಾರಣ ಕೆಲಸ ಬಿಟ್ಟಿದ್ದಾರೆ. ನಮ್ಮ ಮನೆತನಕ್ಕೆ ಜಮೀನು ಇಲ್ಲ. ನಮ್ಮ ಕುಟುಂಬದ ಹಿರಿತನವನ್ನು ನನ್ನ ಗಂಡನಾದ **2** ನೇ ಅರ್ಜಿದಾರರು ಮಾಡುತ್ತಾರೆ. **2** ಮತ್ತು **4** ನೇ ಅರ್ಜಿದಾರರು ಸೇರಿಕೊಂಡೇ ನಮ್ಮ ಕುಟುಂಬದ ನಿರ್ವಹಣೆಯನ್ನು ಈ ಹಿಂದೆಯೂ ನಡೆಸುತ್ತಿದ್ದರು ಮತ್ತು ಈಗಲೂ ನಡೆಸುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ಮಗನ ಶವ ಸಾಗಾಣಿಕೆಗೆ ಮತ್ತು ಅಂತ್ಯ ಕ್ರಿಯೆಗೆ ಒಂದು ಲಕ್ಷ ರೂಪಾಯಿ ಹಣ ಖರ್ಚು ಮಾಡಿದ್ದೇವೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ನನ್ನ ಮಗ ಮದ್ಯ ಸೇವನೆ ಮಾಡಿಕೊಂಡು ದ್ವಿಚಕ್ರ ವಾಹನವನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿದ್ದರಿಂದಲೇ ಅಪಘಾತವಾಗಿದೆ ಎಂದರೆ ಸರಿಯಲ್ಲ. ಅಪಘಾತವು ಕೇವಲ ನನ್ನ ಮಗನ ತಪ್ಪಿನಿಂದ ಆಗಿರುವ ಕಾರಣ ಎದುರುದಾರರು ನಮಗೆ ಯಾವುದೇ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲಃ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**
ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್